**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ 1056/2024**

**ಸಾಕ್ಷಿಯನ್ನು ದಿಃ 05.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಲೋಲಾಕ್ಷಿ ಟಿ.ಎಸ್ | ಸಿಡಬ್ಲ್ಯೂ:17 | ಪಿಡಬ್ಲ್ಯೂ:8 |
| ಗಂಡನ ಹೆಸರು | ಡಾಃ.ಶ್ರೀನಿವಾಸ್ ಯಾದವ್ | | |
| ವಯಸ್ಸು | 43 ವರ್ಷ | | |
| ಕೆಲಸ | ಪಿ.ಐ ಲಶ್ಕರ್ ಪೊಲೀಸ್ ಠಾಣೆ,<br>ಮೈಸೂರು ನಗರ. | | |
| ವಾಸಸ್ಥಳ | ಮೈಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ದಿಃ 09.08.2023 ರಿಂದ ದಿಃ 06.06.2025 ವರೆಗೆ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪಿ.ಐ.ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ25.05.2024 ರಂದು ಈ ಕೇಸ್ ನ ಕಡತವನ್ನು ಚಾಸಾ 16 ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆ ಕೈಗೊಂಡಿರುತ್ತೇನೆ. ಅದೆ ದಿನ ರಂದು ಮಧ್ಯಾಹ್ನ 12.30 ರಿಂದ 3.00 ರ ವರೆಗೆ ಶವ ತನಿಖಾ ವರದಿಯನ್ನು ಪಂಚರಾದ ಚಾಸಾ 7 ರಿಂದ 9 ರವರ ಸಮಕ್ಷಮ ಜರುಗಿಸಿರುತ್ತೇನೆ. ಸದರಿ ಶವಾ ತನಿಖಾ ವರದಿಯನ್ನು ಈಗಾಗಲೆ ನಿಪಿ. 5 ಎಂದು ಆರೋಪಿ ಸಮ್ಮತಿ ಮೇರೆಗೆ ಗುರುತಿಸಲಾಗಿದೆ. ಅದೆ ದಿನ ಸಂಜೆ 5.00 ರಿಂದ 5.45 ರ ವರೆಗೆ ಚಾಸಾ 2 ರವರು ತೋರಿಸಿದ ಕೃತ್ಯ ಸ್ಥಳದ ಮಹಜರ್ ಕ್ರಮವನ್ನು ಚಾಸಾ 3 ಮತ್ತು 4 ರವರು ಸಮಕ್ಷಮ ಜರುಗಿಸಿರುತ್ತೇನೆ. ಆ ಸಮಯದಲ್ಲಿ ಫೋಟೊ ಕೂಡ ತೆಗೆಸಿರುತ್ತೇನೆ. ಸ್ಥಳ

ಮಹಜರ್ ನಿಪಿ. 2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 2(ಡಿ) ಎಂದು ಗುರುತಿಸಲಾಯಿತು. ದಿಃ 25.05.2024 ರಂದು ಚಾಸಾ 2 ರವರ ಹೇಳಿಕೆ ಪಡೆದಿರುತ್ತೇನೆ.

ದಿಃ 27.05.2024 ರಂದು ಬೆಳಿಗ್ಗೆ 11.00 ರಿಂದ 11.45 ರ ವರೆಗೆ ವಾಹನದ ಮಾಲಿಕರಾದ ಆರೋಪಿ ಆತ್ರಯ ಪ್ರಬಿ ಕೆಎ 09 ಎಂ.ಸಿ 2857 ನ ಮಾರುತಿ ಆಲ್ಟೋ ಕಾರನ್ನು ಠಾಣಾ ಆವರಣಕ್ಕೆ ತಂದು ಹಾಜರು ಪಡಿಸಿದ್ದು, ಚಾಸಾ 5 ಮತ್ತು 6 ರವರು ಸಮಕ್ಷಮ ಅಮಾನತ್ತು ಮಹಜರ್ ಕ್ರಮ ಜರುಗಿಸಿರುತ್ತೇನೆ. ಪೋಟೊ ಕೂಡ ತೆಗೆಸಿರುತ್ತೇನೆ. ಸದರಿ ಅಮಾನತ್ತು ಮಹಜರ್ ಅನ್ನು ಈಗಾಗಲೆ ನಿಪಿ. 7 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 7(ಸಿ) ಎಂದು ಗುರುತಿಸಲಾಯಿತು. ಪೋಟೂವನ್ನು ನೊಡಿ ಗುರುತಿಸಿದ್ದು, ಅದನ್ನು ಈಗಾಗಲೆ ನಿಪಿ. 9 ಎಂದು ಗುರುತಿಸಲಾಗಿದೆ. ಅಮಾನತ್ತು ಪಡಿಕೊಂಡ ವಾಹನವನ್ನು ಪಿ.ಫ್. 129/2024 ರಂತೆ ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೂಂಡಿರುತ್ತೇನೆ.

ಅದೆ ದಿನ ವಾಹನದ ಮಾಲೀಕರಾದ ಈ ಪ್ರಕರಣದ ಆರೋಪಿ ಆತ್ರೆಯ ಪ್ರಭು ರವರಿಗೆ ಐ.ಎಂ.ವಿ ಕಾಯಿದೆ ಕಲಂ 133 ಅಡಿ ನೊಟೀಸು ನೀಡಿ, ಉತ್ತರ ಪಡೆದಿರುತ್ತೇನೆ. ಸದರಿ ನೊಟೀಸು ಮತ್ತು ಉತ್ತರವನ್ನು ನಿಪಿ. 10 ಮತ್ತು 11 ಎಂದು, ಸಾವಿಕ್ಷಿಯ ಸಹಿಗಳನ್ನು ನಿಪಿ. 10(ಎ) ಮತ್ತು 11(ಎ) ಎಂದು ಗುರುತಿಸಲಾಯಿತು. ನಂತರ ಆತನಿಂದ ಇಂಡಿಮಿನಿಟಿ ಬಾಂಡ್ ಪಡೆದು ಕಾರನ್ನು ಅನ್ನು ಆರೋಪಿತನ ವಶಕ್ಕೆ ಬಿಡುಗಡೆ ಗೊಳಿಸಿರುತ್ತೇನೆ. ಸದರಿ ಇಂಡಿಮಿನಿಟಿ ಬಾಂಡ್ ಅನ್ನು ನಿಪಿ. 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು. ಅದೆ ದಿನ ಆರೋಪಿಗೆ ಸಿ.ಆರ್.ಪಿ.ಸಿ ಕಲಂ 41 ಅಡಿ ನೊಟೀಸು ನೀಡಿ ಜಾಮೀನು ಮೇಲೆ ಬಿಡುಗಡೆ ಗೊಳಿಸಿರುತ್ತೇನೆ.

ದಿಃ 03.06.2024 ರಂದು ಚಾಸಾ 12 ರವರಿಂದ ಪಿ.ಎಂ. ವರದಿಯನ್ನು ಪಡೆದಿರುತ್ತೇನೆ. ಅದನ್ನು ಈಗಾಗಲೆ ನಿಪಿ. 6 ಎಂದು ಆರೋಪಿತರ ಸಮ್ಮತಿ ಮೇರೆಗೆ ಗುರುತಿಸಲಾಗಿದೆ. ಅದೆ ದಿನ ಚಾಸಾ 13 ರವರಿದ

ಐ.ಎಂ.ವಿ ವರದಿಯನ್ನು ಪಡೆದಿರುತ್ತೇನೆ. ಸದರಿ ಐ.ಎಂ.ವಿ ವರದಿಯನ್ನು ಈಗಾಗಲೆ ನಿಪಿ. 8 ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿ. 8 (ಬಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಹಂತದಲ್ಲಿ ತನಿಖೆ ಪೂರ್ಣಗೊಂಡಿದ್ದು, ಆರೋಪಿತನ ಮೇಲೆ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ಆರೋಪಿತನ ಮೇಲೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಎಸ್.ಕೆ.ಎಸ್ ವಕೀಲರಿಂದಃ**

ಆರೋಪಿಯು ಹಾಜರಿದ್ದು, ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ, ಮುಂದೂಡಲು ಸಕಾರಣಗಳು ಇಲ್ಲದ ಕಾರಣ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.